ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.1677/2024

| | | | |
|---|---|---|---|
| ಹೆಸರು | : | ವಿಜಯಮ್ಮ | ಸಿ .ಡಬ್ಲ್ಯೂ :2 |
| ಗಂಡನ ಹೆಸರು | : | ಲೇಟ್ ಕುಮಾರಯ್ಯ | ಪಿ .ಡಬ್ಲ್ಯೂ :2 |
| ವಯಸ್ಸು | : | 53 ವರ್ಷ | |
| ಉದ್ಯೋಗ | : | ಡಿ ದರ್ಜೆ ನೌಕರರು , ತಾಲ್ಲೂಕು ಕಚೇರಿ , ಗುಬ್ಬಿ | |
| ವಾಸಸ್ಥಳ | : | ಗುಬ್ಬಿ | |

ಸಾಕ್ಷಿಯನ್ನು ದಿಃ 16-04-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

2009 ನೇ ಸಾಲಿನಿಂದ ಇಂದಿನವರೆಗೂ ಗುಬ್ಬಿಯ ತಾಲ್ಲೂಕು ಕಚೇರಿಯಲ್ಲಿ ಡಿ ದರ್ಜೆ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿಃ 01-06-2024 ರಂದು ಶನಿವಾರ ಬೆಳಗ್ಗೆ 8.30 ಕ್ಕೆ ಎಂದಿನಂತೆ ಕಚೇರಿಯ ಸ್ವಚ್ಚತ ಕರ್ತವ್ಯಕ್ಕೆ ಹಾಜರಾಗಿದ್ದೆ . ಆ ಸಮಯ ಅಲ್ಲಿಗೆ ಬಂದ ಹುಡುಗನೊಬ್ಬ Horticulture ಅಧಿಕಾರಿಯ ಕಚೇರಿ ಎಲ್ಲಿದೆ ಎಂದು ಕೇಳಿದ . ಆ ಹುಡುಗ ಮುಖಕ್ಕೆ ಮಾಸ್ಕ ಧರಿಸಿದ್ದ , ಬೆನ್ನಿನ ಮೇಲೆ ಬ್ಯಾಗ್ ನೇತು ಹಾಕಿಕೊಂಡಿದ್ದ , ಒಂದು ಕೈಯಲ್ಲಿ ಮತ್ತೊಂದು ಬ್ಯಾಗ್ ಹಿಡಿದುಕೊಂಡಿದ್ದ , ಇನ್ನೊಂದು ಕೈ ಯಲ್ಲಿ ಮೊಬೈಲ್ ಹಿಡಿದುಕೊಂಡಿದ್ದ . ನಾನು Horticulture ಅಧಿಕಾರಿಯ ಕಚೇರಿ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ ಹೊರಗೆ ಹೋಗಿ ಯಾರನ್ನಾದರು ಕೇಳಿ ಎಂದು ಹೇಳಿದೆ . ನಂತರ ಆ ಹುಡುಗ ಹೊರಗೆ ಹೋದ , ನಂತರ ನಾನು ಮತ್ತೊಂದು ಕೊಠಡಿಯ ಸ್ವಚ್ಚತೆಗೆ ಹೋದೆ . ನಂತರ ನಾನು ಆವರಣವನ್ನು ಸ್ವಚ್ಚಗೊಳಿಸಿ ಮನೆಗೆ ಹೋದೆ , ಕೆಲವು ಸಮಯದ ನಂತರ ಶಿರಸ್ತೇದಾರರು ದೂರವಾರಣಿ ಕರೆ ಮಾಡಿ ಕಚೇರಿಗೆ ಬರಲು ಹೇಳಿದರು, ನಾನು ಕಚೇರಿಗೆ ಹೋದೆ ಸಿಸ್ಟಮ್ ಗಳು ಕಳೆದು ಹೋಗಿವೆ , ಏನಾಯಿತು ಎಂದು ಕೇಳಿದರು , ನಾನು ಗೊತ್ತಿಲ್ಲ ಎಂದು ಹೇಳಿದೆ . CCTV Camera Footage ನಲ್ಲಿ ಹುಡುಗನೊಬ್ಬ ನಿನ್ನೊಡನೆ ಮಾತನಾಡುತ್ತಿದ್ದಾನೆ ಆತ ಯಾರು ಎಂದು ನಿನಗೆ ಗೊತ್ತಿಲ್ಲವೇ ಎಂದು ಕೇಳಿದರು ನಾನು ಗೊತ್ತಿಲ್ಲ ಎಂದು ಹೇಳಿದೆ .

ನಂತರ ಘಟನೆಯ ಬಗ್ಗೆ ದೂರು ನೀಡಲಾಯಿತು . ನಂತರ ದಿಃ 01-06-2024 ರಂದು ಪೊಲೀಸರು ಆ ದಿನ ನನ್ನೊಡನೆ ಮಾತನಾಡಿದ್ದ ಹುಡುಗನನ್ನು ಕರೆದುಕೊಂಡು ಬಂದಿದ್ದರು . ನಾನು ಅದೇ ಹುಡುಗ ಮಾತನಾಡಿದ್ದು ಎಂದು ತಿಳಿಸಿದೆ . ಸದರಿ

ಹುಡುಗನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿದ್ದಾರೆ

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು.

<u>ಪಾಟೀಸವಾಲುಃ ಸ ಸ ಅ ರವರಿಂದಃ</u>-

ದಿಃ 06-07-2024 ರಂದು ಪೊಲೀಸರು ಆರೋಪಿತರನ್ನು ಕಚೇರಿಗೆ ಕರೆದುಕೊಂಡು ಬಂದಿದ್ದರು ನಾನು ಆ ದಿನ ಆರೋಪಿತರನ್ನು ಗುರುತಿಸಿದ್ದೇನೆ ಎಂದರೆ ಸರಿ .

<u>ಪಾಟೀಸವಾಲು: ಆರೋಪಿ ಪರ ವಕೀಲರಿಂದಃ</u>-

ಮೇಲೆ ಹೇಳಿದ ದಿನಾಂಕದಂದು ನಾನು ಕಚೇರಿಗೆ ಬಂದ ಸಮಯ ಬೇರೆ ಯಾರು ಬಂದಿರಲಿಲ್ಲ . ರಾತ್ರಿ ಪಾಳಿಯ ನೌಕರರು ಕಚೇರಿಯ ಬೀಗವನ್ನು ತೆಗೆದು ನನ್ನ ಬಳಿ ಕೀಲಿ ಕೈ ಯನ್ನು ನೀಡಿದ್ದರು , ನಾನು ಆವರಣವನ್ನು ಸ್ವಚ್ಚಗೊಳಿಸುತ್ತಿದ್ದೆ . ನಾನು ಸ್ಥಳಕ್ಕೆ ಬರುವ ಮೊದಲು ಕಚೇರಿಯಲ್ಲಿ ರಾತ್ರಿ ಪಾಳಿಯ ನೌಕರರು ಇದ್ದರು . ಮೇಲೆ ಹೇಳಿದಂತೆ ನನ್ನೊಡನೆ ಆ ದಿನ ಮಾತನಾಡಿದ ಹುಡುಗ ಮುಖಕ್ಕೆ ಮಾಸ್ಕ ಹಾಕಿದ್ದ ಕಾರಣ ನನಗೆ ಆತನ ಗುರುತು ಸಿಕ್ಕಿರಲಿಲ್ಲ ಎಂದರೆ ಸರಿಯಲ್ಲ. ನಾನು ಸಿಸ್ಟಮ್ ಗಳು ಇದ್ದ ಕೊಠಡಿಯನ್ನು ಸ್ವಚ್ಚಗೊಳಿಸಿ ಪಕ್ಕದ ಕೊಠಡಿಗೆ ಹೋಗುವಾಗ ಸದರಿ ಕೊಠಡಿಯಲ್ಲಿ ಸಿಸ್ಟಮ್ ಗಳು ಇದ್ದದನ್ನು ನಾನು ನೋಡಿದ್ದೆ . ನಾನು ಮೂರನೇ ಕೊಠಡಿಯನ್ನು ಸ್ವಚ್ಚಗೊಳಿಸುತ್ತಿದ್ದೆ, ಆ ಸಮಯ ಮೇಲೆ ಹೇಳಿದಂತೆ ನನ್ನೊಡನೆ ಮಾತನಾಡುತ್ತಿದ್ದರು. ನಾನು ಹೊರಗೆ ಹೋಗಿ ಯಾರನ್ನಾದರೂ ಕೇಳಿ ಎಂದು ಅವರಿಗೆ ಹೇಳಿ ನಂತರ ಪಕ್ಕದ ಕೊಠಡಿಗೆ ಕಸ ಗುಡಿಸಲು ಹೋಗಿದ್ದೆ . ಆ ದಿನ ಬೆಳಗ್ಗೆ 10.30 ಗಂಟೆಗೆ ನಾನು ಮನೆಗೆ ಹೋಗಿದ್ದೆ . ಆ ಸಮಯಕ್ಕೆ ಡಿ ದರ್ಜೆ ನೌಕರರು ಕಚೇರಿಗೆ ಹಾಜರಾಗಿದ್ದರು . ನಾನು ಮನೆಗೆ ಹೋಗುವ ಸಮಯ ಸಿಸ್ಟಮ್ ಗಳು ಇದ್ದ ಕೊಠಡಿಗೆ ಹೋಗಿ ಸಿಸ್ಟಮ್ ಗಳು ಅಲ್ಲಿಯೇ ಇದ್ದವೋ ಇಲ್ಲವೋ ಎಂದು ಪರಿಶೀಲಿಸಿಲ್ಲ , ಡಿ ದರ್ಜೆ ನೌಕರರಿಗೆ ಸಿಸ್ಟಮ್ ಗಳು ನೋಡಿಕೊಳ್ಳಿ ಎಂದು ಹೇಳಿ ಹೋಗಿದ್ದೆ . ನಾನು ಮನೆಗೆ ಹೋಗುವ ವೇಳೆಗೆ ಮೂರು ಜನ ಡಿ ದರ್ಜೆ ನೌಕರರು ಬಂದಿದ್ದರು . ಮೇಲೆ ಹೇಳಿದಂತೆ ಆ ದಿನ ನನ್ನೊಡನೆ ಮಾತನಾಡಿದ್ದ ಹುಡುಗ ಮುಖಕ್ಕೆ ಮಾಸ್ಕ ಧರಿಸಿದ್ದ ಕಾರಣ ನನಗೆ ಆತನ ಮುಖಚಹರೆ ಬಗ್ಗೆ ಗುರುತು ಇರಲಿಲ್ಲ , ಪೊಲೀಸರು ಆರೋಪಿತರನ್ನು ಕರೆದುಕೊಂಡು ಬಂದಾಗ ಅವರೇ ಆ ದಿನ ಮಾತನಾಡಿಸಿದ್ದ ಹುಡುಗ ಎಂದು ಗುರುತಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು

ಆರೋಪಿತರನ್ನು ಎಂದೂ ನೋಡಿಲ್ಲ , ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.